International Journal of Kannada Research 2018; 4(3): 202-206

International Journal of Kannada Research
www.kannadajournal.com

**ISSN: 2454–5813**
IJKR 2018; 4(3): 202-206
© 2018 IJKR
www.kannadajournal.com
Received: 04-05-2018
Accepted: 05-06-2018

**Kumar P**
District Coordinator,
Suvarna Arogya Suraksha Trust,
Chikmagalur, Karnataka, India

**Correspondence**
**Kumar P**
District Coordinator,
Suvarna Arogya Suraksha Trust,
Chikmagalur, Karnataka, India

# ಕಾರ್ಮಿಕರು ಮತ್ತು ಮಾಲಿಕರ ಅಭಿವೃದ್ಧಿಯಲ್ಲಿ ಕಾಫಿ ತೋಟದ ಪಾತ್ರ

**Kumar P**

### ಪ್ರಸ್ತಾವನೆ

ಕಾರ್ಮಿಕರು ಮತ್ತು ಮಾಲಿಕರ ಅಬಿವೃದ್ಧಿಯಲ್ಲಿ ಕಾಫಿ ತೋಟದ ಪಾತ್ರ ಈ ಕುರಿತು ಚಿಕ್ಕಮಗಳೂರು ತಾಲ್ಲೂಕಿನ ಒಂದು ಅಧ್ಯಯನ ಎಂಬ ವಿಷಯದ ಮೇಲೆ ಸಂಶೋಧನೆ ಕೈಗೊಳ್ಳಲಾಗಿದೆ. ಕಾಫಿ ಒಂದು ವಾಣಿಜ್ಯ ಬೆಳೆಯಾಗಿದ್ದು ಕಾಫಿಯನ್ನು ಬೆಳೆಯುತ್ತಿರುವ ಪ್ರಪಂಚದಲ್ಲಿನ ದೇಶಗಳಲ್ಲಿ ಭಾರತವು ಸಹ ಒಂದು ಎಂಬುದನ್ನು ಕಾಣುತ್ತೇವೆ. ವಿಶ್ವಮಟ್ಟದಲ್ಲಿ ಭಾರತದ ಕಾಫಿ ಉತ್ಪಾದನೆಯ ಪ್ರಮಾಣ ೨% ಆದರೆ ಬ್ರೆಜಿಲ್ ೨೬% ಉತ್ಪಾದಿಸುವ ಮೂಲಕ ಪ್ರಥಮ ಸ್ಥಾನದಲ್ಲಿದ್ದರೆ ಕೊಲಂಬಿಯ ೧೪% ಉತ್ಪಾದಿಸುವ ಮೂಲಕ ೨ನೇ ಸ್ಥಾನವನ್ನು ಪಡೆದುಕೊಂಡಿದೆ ಎಂದು ಹೇಳಬಹುದು. ಭಾರತದಲ್ಲಿ ಕೆಲವೇ ರಾಜ್ಯಗಳು ಕಾಫಿಯನ್ನು ಬೆಳೆಯುತ್ತಿರುವುದು ಕಂಡುಬರುತ್ತದೆ. ಅವುಗಳು ಎಂದರೆ ಕರ್ನಾಟಕ, ತಮಿಳುನಾಡ, ಆಂಧ್ರಪ್ರದೇಶ, ಅಸ್ಸಾಂ, ಕೇರಳ ಇಂತಹ ಕೆಲವೇ ರಾಜ್ಯಗಳು ಕಾಫಿಯನ್ನು ಬೆಳೆಯುತ್ತಿರುವುದು ಕಂಡುಬರುತ್ತದೆ. ಅದೇ ರೀತಿಯಾಗಿ ಕರ್ನಾಟಕ ರಾಜ್ಯದಲ್ಲಿಯೂ ಸಹ ಕೆಲವೆ ಜಿಲ್ಲೆಗಳಲ್ಲಿ ಕಾಫಿಯನ್ನು ಬೆಳೆಯುತ್ತಿರುವುದು ಕಂಡುಬರುತ್ತದೆ. ಅಂತವುಗಳೆಂದರೆ, ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ, ಹಾಸನ ಇತ್ಯಾದಿ ಈ ಜಿಲ್ಲೆಗಳಲ್ಲಿ ಬೆಳೆಗಾರರಲಾಭಗಳಿಕೆಯ ಪ್ರಮುಖ ಬೆಳೆಯಾಗಿ ನಮಗೆ ಕಂಡು ಬರುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಪ್ರಮುಖ ಬೆಳೆ ಕಾಫಿಯಾಗಿದ್ದು ಪ್ರತಿಯೊಂದು ಮಲೆನಾಡಿನ ತಾಲ್ಲೂಕುಗಳಲ್ಲಿಯೂ ಕಾಫಿ ಆಧಾರಿತ ಜನರನ್ನು ಕಾಣಬಹುದು ಪ್ರತಿಯೊಂದು ತಾಲ್ಲೂಕಿನಲ್ಲಿ ಕಾಫಿ ತೋಟ ಹೊಂದಿರುವ ಹಳ್ಳಿಗಳನ್ನು ತಿಳಿಯುವುದಾದರೆ ಚಿಕ್ಕಮಗಳೂರು ೮೯ ಮೂಡಿಗೆರೆ ೧೩೬ ನರಸಿಂಹರಾಜಪುರ ೨೧ ತರೀಕೆರೆ ೦೮ ಕೊಪ್ಪ ಮತ್ತು ಶೃಂಗೇರಿಯಲ್ಲಿ ೧೬ ಹಳ್ಳಿಗಳು ಕಾಫಿಯನ್ನು ಬೆಳೆಯುತ್ತವೆ. ಚಿಕ್ಕಮಗಳೂರು ತಾಲೂಕಿನಲ್ಲಿ ಬೆಳೆಯುವ ಬೆಳೆಗಳಲ್ಲಿ ಬಹುತೇಕ ಕಾಫಿಬೆಳೆಯುವವರು ಹೆಚ್ಚಿದ್ದು. ಇಲ್ಲಿ ಅರೆಭಿಕಾ ಕಾಫಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ.

### ಪೀಠಿಕೆ

ಕಾಫಿ ಬೆಳೆಯು ಪ್ರಥಮ ಭಾರಿಗೆ ಭಾರತಕ್ಕೆ ಬಂದದ್ದು ೧೧ನೇ ಶತಮಾನದಲ್ಲಿ ಅಂದರೆ ೧೬೭೦ರ ದಶಕದಲ್ಲಿ ಕಾಫಿಯನ್ನು ಬಾಬಾಬುಡನ್ ಎಂಬ ವ್ಯಕ್ತಿಯು ಅರಭಿಯದಿಂದ ೭ ಕಾಫಿ ಬೀಜವನ್ನು ತಂದು ಚಿಕ್ಕಮಗಳೂರಿನ ಮುಳ್ಳಯ್ಯನಗಿರಿ ಪಕ್ಕದ ಬೆಟ್ಟದಲ್ಲಿ ಬಂದು ನೆಲೆಸಿದನು. ಆದು ಇಂದು ಬಾಬಾಬುಡನ್ ಗಿರಿಯಾಗಿದ್ದು ಅಲ್ಲಿನ ಅತ್ತಿ ಗುಂಡಿ ಇಂಬ ಊರಿನಲ್ಲಿ ಕಾಫಿಯನ್ನು ಬೆಳೆಯಲು ಪ್ರಾರಂಭಿಸಿದರು ಎಂದು ಹೇಳಬಹುದು ನಂತರ ಇದು ಇಡೀ ಜಿಲ್ಲೆಯನ್ನು ಅವರಿಸಿದೆ. ಪ್ರಾರಂಭದಲ್ಲಿ ಬುಡನ್ ಕಾಫಿಗಿಡವನ್ನು ತಂದನು ಇದು ಅರಬಿಯಾದಿಂದ ತಂದಿದ್ದರಿಂದ ಅರಭಿಕಾ ಎಂಬ ಹೆಸರು ಬಂದಿತು. ಕಾಫಿಯಲ್ಲಿ ನಾವು ಇಂದು ಪ್ರಮುಖವಾಗಿ ೨ ವಿಧಗಳನ್ನು ಕಾಣುತ್ತವೆ.

೧. ಅರೇಭಿಕಾ ಮತ್ತು ರೊಬಾಸ್ಟಾ ಇವುಗಳಾಗಿವೆ.

ಇಂದು ಕರ್ನಾಟಕದಲ್ಲಿ ೨.೦೪೨೭೮ ಎಕರೆ ಪ್ರದೇಶದಲ್ಲಿ ಕಾಫಿಯನ್ನು ಬೆಳೆಯಲಾಗುತ್ತಿದೆ. ಚಿಕ್ಕಮಗಳೂ ಜಿಲ್ಲೆಯಲ್ಲಿ ಅರಭಿಕಾವನ್ನು೫೭೦೦೦ ಹೆಕ್ಟರ್ ಪ್ರದೇಶದಲ್ಲಿ ಬೆಳೆಯುತ್ತಿದ್ದಾರೆ. ರೋಬಾಸ್ಟಾವನ್ನು ೩೧೮೫೩ ಹೆಕ್ಟರ್ ಪ್ರದೇಶದಲಿ ಬೆಳೆಯುತ್ತಿದ್ದಾರೆ. ಒಟ್ಟು ಚಿಕ್ಕಮಗಳೂರಿನಲ್ಲಿ ೮೮,೮೫೩ ಹೆಕ್ಟರ್ ಪ್ರದೇಶದಲ್ಲಿ ಕಾಫಿಯನ್ನು ಬೆಳೆಯುತ್ತಾರೆ. ಚಿಕ್ಕಮಗಳೂರಿನಲ್ಲಿ ಅರೇಭಿಕಾವನ್ನು ಒಂದು ಎಕರೆಗೆ ೭೮೯ ಕೆ.ಜಿ. ಕೊಡಗು ೯೮೨ ಹಾಸನ ೭೫೭ ಕೆ.ಜಿ. ಪ್ರತಿ ಎಕರೆಗೆ ಬೆಳೆಯುತ್ತಾರೆ. ಅದೇರೀತಿ ರೊಬಸ್ಟಾ ಕೊಡಗು ೫೩೦, ಹಾಸನ್ ೧೦೬೬ ಚಿಕ್ಕಮಗಳೂರು ೮೪೦ ಕೆ.ಜಿ ಪ್ರತಿ ಎಕರೆಗೆ ಬೆಳೆಯುತ್ತಾರೆ. ಕರ್ನಾಟಕದಲ್ಲಿ ಅರಭಿಕವನ್ನು ಬೆಳೆಯುವುದರಲ್ಲಿ ಚಿಕ್ಕಮಂಗಳೂರು ಪ್ರಥಮ ಸ್ಥಾನದಲ್ಲಿದ್ದು. ರೊಬಾಸ್ಟಾ ಬೆಳೆಯುಮುದರಲ್ಲಿ ೨ನೇ ಸ್ಥಾನದಲ್ಲಿದೆ. ರೊಬಾಸ್ಟಾವನ್ನು ಬೆಳೆಯುವಲ್ಲಿ ಪ್ರಥಮ ಸ್ಥಾನ ಕೊಡಗು ಪಡೆದುಕೊಂಡಿದೆ.

**ಕಾಫಿ ಬೆಳೆಯ ಸ್ವರೂಪ**

ಕಾಫಿ ಬೀಜವನ್ನು ಮೊಳಕೆ ಮಾಡಿ ಒಂದು ಅಥವ ಎರಡು ವರ್ಷಗಳ ನಂತರ ಅರಬಿಕಾ ಗಿಡವನ್ನು ೬–೭ ಅಡಿಗಳಿಗೆ ಒಂದುಗಿಡದಂತೆ ನೆಡಲಾಗುತ್ತದೆ. ಅದೆ ರೀತಿ ರೊಬಾಸ್ಟಾವನ್ನು ೯–೧೦ ಅಡಿಗೆ ನೆಡಲಾಗುತ್ತದೆ. ಮೂರುವರ್ಷದ ನಂತರ ಮುಂಗಾರು ಮಳೆಗೆ ಹೂ ಬಿಡುತ್ತದೆ. ಹೂ ಬಿಳಿಯಾಗಿರುತ್ತದೆ. ನಂತರ ಹಸಿರು ಕಾಯಿಗಳು ಬೆಳೆದು ಕೆಂಪು ಹಣ್ಣುಗಳಾಗುತ್ತವೆ. ನಂತರ ಅದನ್ನು ಬಿಡಿಸಿ ಯಂತ್ರದಲ್ಲಿ ಸಿಪ್ಪೆ ತೆಗೆದು ಒಣಗಿಸಿ ಮಾರಲಾಗುತ್ತದೆ.

**ಸಾಹಿತ್ಯ ಅವಲೋಕನ**

**ಐಯಂಗರ್** (೧೯೫೯) ಭಾರತದಲ್ಲಿ ಕಾಫಿ ಉತ್ಪಾದನೆಬಗ್ಗೆ ಕೆಲವೊಂದು ವಿಚಾರ ಕಂಡುಹಿಡಿದರು ಕಾಫಿ ಉತ್ಪಾದನೆ ವಿಶ್ವದಲ್ಲಿ ೨೫% ಬೆಳೆಯುವ ಬೆಳೆಯುವ ಅವಶ್ಯಕತೆ ಇದೆ. ೧% ಬೆಳೆಯುತ್ತಿದ್ದಾರೆ, ೨೫,೦೦೦ ಎಕರೆ ಭೂಮಿಯನ್ನು ಈ ೧%ಗೆ ಬೆಳೆಯಲು ಊಪಯೋಗಿಸಲಾಗುತ್ತಿದೆ. ಅಂದರೆ ೨೫,೦೦೦ ಟನ್ ಆಂತರಿಕ ಬಳಕೆಗೆ ಅಂದರೆ ಕೊಳ್ಳುವ ಉದ್ದೇಶದಿಂದ ಹಾಗೂ ಉಳಿದ ೧೫,೦೦೦ ಟನ್‌ನಷ್ಟು ರಫ್ತು ಮಾಡಲಾಗುತ್ತಿದೆ. ಮೊದಲಿನಿಂದಲೂ ಕಾಫಿಬೆಲೆ ಏರುತ್ತಲಿದ್ದು ಬೆಳೆಗೆ ತಗಲುವ ವೆಚ್ಚ ಮತ್ತು ಬೆಲೆಗೆ ಸರಿಯಾದ ಹೊಂದಾಣಿಕೆಯಾಗುತ್ತಿಲ್ಲ ಇದನ್ನು ಒದಗಿಸುವುದು ಅಗತ್ಯ ಈಗ ನಮ್ಮ ಆಕಾಯ ೩೩೦ಟಛ ಪ್ರತಿ ಏಕರೆಗೆ ಅರೆಬಿಕಾ ಬೆಳೆಗೆ ೪೦೦ಟಛ ಪ್ರತಿ ಎಕರೆಗೆ ರೊಬಾಸ್ಟ ಬೆಳೆಗೆ ಮತ್ತು ೩೭೫ಟಛ ಪ್ರತಿ ಎಕರೆಗೆ ಎರಡನ್ನು ಸೇರಿ ಇದರಿಂದ ಆದಾಯ ಏರುತ್ತಿದ್ದು ಇದು ಉತ್ತಮ ಬೆಳವಣಿಗೆ ತೋರುತ್ತದೆ. ಈ ಎರಡು ಬೆಳೆಗಳ ಸಮತೋಲನ ಅನುಪಾತವು ೨:೩:೪(ಓಕಪ) ಈ ಎರಡುಬೆಳೆಗಳು ಅತಿ ಹೆಚ್ಚಿನ ಸಾರಜನಕದಿಂದ ಕೂಡಿದ್ದು ರಂಜಕ ಮತ್ತು ಲೋಹದ ಅಂಶಕಡಿಮೆ ಇದೆ. ಈ ಎರಡನ್ನ ಉತ್ಪಾದಿಸಲು ೫೦ ಸಾರಜನಕ, ೭೫ ರಂಜಕ, ಅಂಶಗಳು ೧೦೦ ಕೆ.ಜಿ. ಪೊಟಾಶಿಯಂ ಪ್ರತಿ ಒಂದು ಎಕರೆ ಉತ್ಪಾದನೆಗೆ ಸರಾಸರಿ ೭–೮ ಭಾಗ ಪ್ರತಿ ಎಕರೆಗೆ ಸಾಮಾನ್ಯವಾಗಿ ಬೆಳೆಯಲಾಗುತ್ತದೆ.

**ಸೆರ್ರು:–** (೧೯೪೭) ಕಾಫಿತೋಟದ ಆರ್ಥಿಕ ಮಟ್ಟವನ್ನ ವಿಶ್ಲೇಷಿಸುವಂತ ವ್ಯಾಪ್ತಿಯಾಗಿದ್ದು ಮುಖ್ಯವಾಗಿ ಇವರು ಕಾಫಿತಯಾರಿಸುವ ಕೈಗಾರಿಕೆಗಳ ಕಡೆಗಮನ ಸೆಳೆದಿದ್ದು ಅವುಗಳ ಸರ್ವತೋಮುಖ ಬೆಳೆವಣಿಗೆ ಉತ್ತಾದನಾ ಶಕ್ತಿ ಯಂತ್ರಗಳು ರಸಾಯನಿಕಗಳು ನೈಜವಾಗಿ ಕಾಫಿಯ ಬೆಳೆಗಳನ್ನು ಕೊಲ್ಲಲು ಸಹಯಕವಾಗಿದ್ದು ಅವುಗಳನ್ನು ಬಿಟ್ಟು ಸಂಪನ್ಮೂಲ ಮತ್ತು ಭೂಮಿಯ ಸರಿಯಾದ ಬಳಕ್ಕೆ ಅಗತ್ಯ.

**ಮುಟುಕು :** (೧೯೬೬) ಇವರು ೫೩ ಸಂಸ್ಥೆಗಳನ್ನು ನೈರೊ ಜಿಲ್ಲೆ ಕಿನ್ಯದೇಶದಲ್ಲಿ ಅಧ್ಯಯನಮಾಡಿದ್ದು ಇವರ ಸಮಿಕ್ಷಯ ಪ್ರಕಾರ ೪೨% ವೆಚ್ಚ ಕಾಫಿ ಬೆಳೆಗೆ ಖರ್ಚಾಗುತ್ತಿದ್ದು ಬೆಳೆಗಾರರು ಪ್ರತಿವರ್ಷ ಖರ್ಚುಮಾಡುತ್ತಿದ್ದಾರೆ. ಬಾಡಿಗೆ ತೆಗೆದುಕೊಂಡಂತಹ ಕೆಲಸಗಾರರು ಸಂಸ್ಥೆಯಲ್ಲಿ ದುಡಿಯುವಂತಹ ಕೆಲಸಗಾರರಿಗಿಂತ ಭಿನ್ನವಾಗಿದ್ದು ಕಾರ್ಮಿಕರನ್ನ ಬಾಡಿಗೆ ತೆಗೆದುಕೊಳ್ಳಲು ಸಣ್ಣ ಸಂಸ್ಥೆ ಅತೀ ಹೆಚ್ಚಾದ ಖರ್ಚನ್ನು ಮಾಡುತ್ತಿದ್ದು ಸರಿಯಾದ ಕೆಲಸ ಪಡೆದುಕೊಂಡು ಸಣ್ಣ ಬೆಳೆಗಾರರು ಮತ್ತು ಸಂಸ್ಥೆಗಳು ಅತಿಹೆಚ್ಚಿನ ಲಾಭ ಪಡೆದಿದ್ದಾರೆ.

**ವಾಟರಮಣಿ ಮತ್ತು ಅಜಿಜುದ್ದಿನ್:–** (೧೯೭೩) ರಲ್ಲಿ ಇವರು ಕಾಫಿಯಲ್ಲು ಸಹ ಹಸಿರು ಕ್ರಾಂತಿಯನ್ನು ಅಳವಡಿಸಲು ಅಂದರೆ ಹೆಚ್ಚಿನ ಉತ್ಪಾದನೆ, ಸುಮಾರು ೨೫,೦೦೦ ವರ್ಷಗಳ ಹಿಂದಿನ ವರ್ಷಗಳನ್ನುತೆಗೆದುಕೊಂಡರೆ ೬೮೫ರ ಸೂಚ್ಯಾಂಕದಿಂದ ೮೨೧ರ ವರೆಗೆ ಅದರಷ್ಟಕ್ಕೆ ಏರಿದೆ. ಇದು ವೈಜ್ಞಾನಿಕ ಬೆಳವಣಿಗೆ ಅಳವಡಿಕೆ ಮತ್ತು ಸಂಶೋಧನೆಯಿಂದ ಕಾಫಿ ಉತ್ಪಾದನೆ ಹೆಚ್ಚಗಿದೆ.

**ರಾಮೇಗೌಡ.ಎ:** (೧೯೯೭) ಕಾಫಿ ತೋಟದಲ್ಲಿ ಮಹಿಳಾ ಕಾರ್ಮಿಕರ ಸಾಮಾಜಿಕ – ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಮಾಹಿತಿಯನ್ನು ಚರ್ಚಿಸಲಾಗಿದೆ. ಭಾರತದ ಆರ್ಥಿಕ ಮಲಯದಲ್ಲಿ ಸಂಘಟಿತ ವಲಯ ಬಹಳ ಮುಖ್ಯ. ಆದರೆ ಸಂಘಟಿತ ವಲಯದಲ್ಲಿ ಚಟುವಟಿಕೆಗಳನ್ನು ಗಾಳಿಗೆ ತೂರಿ ಅಸಂಘಟಿತ ವಲಯದ ಚಟುವಟಿಕೆಗಳನ್ನು ಕಾಫಿ ತೋಟದಲ್ಲಿ ದುಡಿಯುವ ಮಹಿಳೆಯರ ಮೇಲೆ ವಿಧಿಸಲಾಯಿತು. ಇಲ್ಲಿ ಮಹಿಳಾ ಕಾರ್ಮಿಕರ ಆರ್ಥಿರ ಸಾಮಾಜಿಕ ಬದುಕಿನ ಮೇಲೆ ಸಾಕಷ್ಟು ಬೆಳಕನ್ನು ಚಲ್ಲಿದೆ. ದುಡಿಮೆಯ ಸ್ಥಳದಲ್ಲಿ ಕಾರ್ಮಿಕರ ಶಕ್ತಿಯ ಬಳಕೆ ಅವರ ದೈಹಿಕ, ಮಾನಸಿಕ ಶಕ್ತಿಯ ಹಿನ್ನಲೆ ಅವರ ಕೂಲಿ ಸೌಲಭ್ಯಗಳ ಸ್ವರೂಪ ಅವರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಈ ಗ್ರಂಥದಲ್ಲಿ ಚರ್ಚಿಸಲಾಗಿದೆ.

**ಸಂಶೋಧನೆಯ ಉದ್ದೇಶಗಳು**

ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಕಾಫಿ ತೋಟದ ಮಾಲಿಕರು ಮತ್ತು ಕಾರ್ಮಿಕರ ಅಭಿವೃದ್ಧಿಯಲ್ಲಿ ಕಾಫಿ ತೋಠದ ಪಾತ್ರ ಎಂಬ ಶಿರ್ಷಿಕೆಯ ಅಡಿಯಲ್ಲಿ ಮಾಲಿಕರು ಮತ್ತು ಕಾರ್ಮಿಕರ ರಾಜಕೀಯ ಆರ್ಥಿಕ ಸಮಾಜೀಕ ಶೈಕ್ಷಣಿಕ ಪ್ರಗತಿ ಹಾಗೂ ಪ್ರಮುಖ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡುವುದಾಗಿದೆ.

- ಕಾರ್ಮಿಕರು ಮತ್ತು ಮಾಲಿಕರ ಆರ್ಥಿಕ ರಾಜಕೀಯ ಸಮಾಜೀಕ ಶೈಕ್ಷಣಿಕ ಅಭಿವೃದ್ಧಿಯ ಬಗ್ಗೆ ತಿಳಿಯುವುದು,
- ಭಾರಿ ಪ್ರಮಾಣದ ಭೂ ಮಾಲಿಕರಾಗಲೂ ಕಾರಣವನ್ನು ತಿಳಿಯುವುದು,
- ಮಾಲಿಕರು ಮತ್ತು ಕಾರ್ಮಿಕರು ಸಮಸ್ಯೆಯನ್ನು ತಿಳಿಯುವುದು ಮತ್ತು
- ಕಾಫಿ ತೋಠದ ಅಭಿವೃದ್ಧಿಯಲ್ಲಿ ಕಾರ್ಮಿಕರು ಮತ್ತು ಮಾಲಿಕರ ಪಾತ್ರವನ್ನು ತಿಳಿಯುವುದು.

**ಪ್ರಾಕಲ್ಪನೆ**

- ಕಾಫಿಯೊಂದು ವಾಣಿಜ್ಯ ಬೆಳೆಯಾಗಿದ್ದು ಮಾಲಿಕರಿಗೆ ಉತ್ತಮ ಆದಾಯವನ್ನು ತಂದುಕೊಡುತ್ತಿದೆ. ಉದಾರಣೆಯೆಂದರೆ ಮಾಲಿಕರ ಆರ್ಥಿಕ ಸ್ಥಿತಯಲ್ಲಿ ಆಗಿರುವ ಬೆಳವಣಿಗೆಗಳು ಸಾಕ್ಷಿಯಾಗುತ್ತವೆ.
- ಕಾಫಿಯಿಂಧ ಕಾರ್ಮಿಕರ ಆರ್ಥಿಕ ಸಾಮಾಜೀಕ ಶೈಕ್ಷಣಿಕ ರಾಜಕೀಯ ಕ್ಷೇತ್ರದಲ್ಲಿನ ಬೆಳವಣಿಗೆಗಳು ಮಾಲಿಕರಿಗೆ ಹೋಲಿಸಿದರೆ ಬಹಳ ಕಡಿಮೆ ಇದ್ದು , ಇದು ಕಾರ್ಮಿಕರ ಮಾನಸಿಕ ದೈಹಿಕ ಹಾಗೂ ಲೈಂಗಿಕ ಶೋಷಣೆ ಹಾಗೂ ಬಾಲಾ ಕಾರ್ಮಿಕತೆಗೆ ಕಾರಣವಾಗಿದೆ.
- ಕಾರ್ಮಿಕರು ಮತ್ತು ಮಾಲಿಕರ ಸಂಬಂಧ ಕೆಳಮಟ್ಟದಲ್ಲಿ ಇದ್ದು ಪ್ರಜಾಪ್ರಭುತ್ವ ಸ್ವಾತಂತ್ರ್ಯ ಸಮಾನತೆಗೆ ವಿರುದ್ಧವಾಗಿದೆ.

ಭೂಮಿ ಕೆಲವೆ ವ್ಯಕಿಗಳ ಕೈಯಲ್ಲಿ ಕೇಂದ್ರಿಕೃತವಾಗಿರುವುದರಿಂದ ಶಿಕ್ಷಣ ಪಡೆದವರು ನಗರಗಳತ್ತ ಮುಖಮಾಡಿದ್ದು ಇದು ಕಾರ್ಮಿಕರ ಸಮಸ್ಯೆಗೆ ಕಾರಣವಾಗಿದ್ದಲ್ಲದೆ, ಇದು ಕಾಫಿಯ ಇಳುವರಿಯ ಮೇಲೆ ಪರಿಣಾಮ ಬೀರುವುದರ ಮುಖಾಂತರ ಬೆಳೆಗಾರರಲ್ಲಿ ಆತಂಕವನ್ನು ಸೃಷ್ಟಿಸಿದೆ.

ಕಾರ್ಮಿಕರ ಸಮಸ್ಯೆ ನಿವಾರಿಸಲು ಹಾಗೂ ಇಳವರಿಯನ್ನು ಹೆಚ್ಚಿಸಲು ಕಾರ್ಮಿಕರಿಗೆ ಸೂಕ್ತ ಭದ್ರತೆಯನ್ನು ಒದಗಿಸುವುದು, ಹಾಗೂ ಭೂ ಮಿತಿ ಕಾಯ್ದೆಯನ್ನು ಜಾರಿ ಗೊಳಿಸುವುದು.

**ಸಂಶೋಧನಾ ವಿಧಾನ**

ಕಾರ್ಮಿಕರು ಮತ್ತು ಮಾಲಿಕರ ಅಭಿವೃದ್ದಿಯಲ್ಲಿ ಕಾಫಿ ತೋಟದ ಪಾತ್ರ ಈ ಕುರಿತು ಚಿಕ್ಕಮಗಳೂರು ತಾಲೂಕಿನ ಒಂದು ಅಧ್ಯಯನ ಎಂಬ ಸಂಶೋಧನಾ ವಿಷಯದ ಮೇಲೆ ಸಂಶೋಧನೆಯನ್ನು ಕೈಗೊಳ್ಳಲಾಗಿದೆ ಪ್ರಸ್ತುತ ಅಧ್ಯಯನವು ಕ್ಷೇತ್ರ ಅಧ್ಯಯನದ ಅಧಾರದ ಮೇಲೆ ಅವಲಂಬಿತವಾಗಿದ್ದು, ನೇರವಾಗಿ ಸಂದರ್ಶನ ಮಾಡುವುದರ ಮೂಲಕ ಸಂಗ್ರಹಣೆ ಮಾಡಲಾಗಿದೆ.ಚಿಕ್ಕಮಳೂರು ಜಿಲ್ಲೆಯ ಚಿಕ್ಕಮಗಳೂರು ತಾಲೂಕಿನ ಕಾಫಿ ತೋಟದಲ್ಲಿ ಕೆಲಸ ಮಾಡುವ ಇಪ್ಪತ್ತೈದು ಕಾರ್ಮಿಕರು ಮತ್ತು

ಇಪ್ಪತ್ತೈದು ಮಾಲಿಕರನ್ನು ಆಯ್ಕೆ ಮಾಡಿಕೊಂಢಿದ್ದು ಕಾರ್ಮಿಕರ ರಾಜಕೀಯ ಸಮಾಜೀಕ ಆರ್ಥಿಕ ಕೌಟುಂಬಿಕ ಜೀವನ ನಿರ್ವಹಣೀಯ ಮೇಲೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಾಲಿಕರ ಅರ್ಥಿಕ ರಾಜಕೀಯ ಸಮಾಜೀಕ ಸ್ಥಿತಿಗತಿ ಹಾಗೂ ಕಾಫಿ ತೋಟದ ಸಮಸ್ಯೆಗಳು ಅಂತಾರಾಷ್ಟ್ರೀಯಾ ಮಟ್ಟದಲ್ಲಿ ಭಾರತದ ಕಾಫಿಗೆ ಇರುವ ಮಾನ್ಯತೆ ಕಾರ್ಮಿಕರು ಮತ್ತು ಮಾಲಿಕರ ಸಂಬಂಧಗಳು ಈ ಕುರಿತು ಮಾಹಿತಿಯನ್ನು ಕಲೆ ಹಾಕಲಾಗಿದೆ ಹಾಗೂ ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರದ ಬಗ್ಗೆ ಅಧ್ಯಯನ ಮಾಡಲಾಗಿದೆ ಚಿಕ್ಕಮಗಳೂರು ತಾಲೂಕಿನ ಒಟ್ಟು ೬೫೮೨ ಕುಟುಂಬಗಳು ಕಾಫಿ ತೋಟವನ್ನು ಹೊಂದಿದ್ದಾರೆ ಇದರಲ್ಲಿ ೨೫ ಎಕ್ಕರೆ. ಹೊಂದಿರುವರನ್ನು ಸಣ್ಣ ಬೆಳೆಗಾರರು ಎಂದು ೨೫ ಎಕ್ಕರೆ ಮೆಲ್ಪಟ್ಟ ಮಾಲಿಕರನ್ನು ದೊಡ್ಡ ಪ್ರಮಾಣದ ಬೆಳೆಗಾರರು ಎಂದು ಹೇಳಲಾಗಿದೆ, ಸಣ್ಣ ಪ್ರಮಾಣದ ಬೆಳೆಗಾರರು ೫೯೫೧ ಕುಟುಂಬಗಳು ಇದ್ದು ದೊಡ್ಡ ಪ್ರಮಾಣದ ಬೆಳೆಗಾರರು ೬೩೧ ಕುಟುಂಬಗಳು ಇದ್ದಾವೆ. ಒಟ್ಟು ೬೫೮೨ ಕಾಫಿ ಬಳೆಗಾರರು ಇದ್ದು ಅವುಗಳಲ್ಲಿ ೨೫ ಬೆಳೆಗಾರರನ್ನು ಆಯ್ಕೆ ಮಾಡಿಕೊಂಡಿದ್ದು ಬಹುತೇಕ ದೊಡ್ಡ ಬೆಳೆಗಾರರನ್ನು ಅಧ್ಯಯಕ್ಕೆ ಒಳಪಡಿಸಲಾಗಿದೆ. ಹಾಗೂ ೨೫ ಕಾರ್ಮಿಕರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಕಾರ್ಮಿಕರು ಮತ್ತು ಮಾಲಿಕರ ಸಂಬಂಧ ಮತ್ತು ಕಾಫಿ ತೋಟದಿಂದ ಯಾರ ಅಭಿವೃದ್ಧಿ ಸಾದ್ಯವಾಗಿದೆ ಮತ್ತು ಕಾರ್ಮಿಕರು ಮತ್ತು ಮಾಲಿಕರ ಆರ್ಥಿಕ ರಾಜಕೀಯ ಶೈಕ್ಷಣಿಕ ಸಮಾಜೀಕ ಸ್ಥಿತಿಗತಿ ಹಾಗೂ ಅವರು ಹೊಂದಿರುವ ಕಾಫಿ ತೋಟದ ವಿವರವನ್ನು ತಿಳಿಯಲಾಗಿದೆ.

**ಮಾಹಿತಿ ಸಂಗ್ರಹಣೆ ಮತ್ತು ದತ್ತಾಂಶ ವಿಶ್ಲೇಷಣೆ**

ಕಾಫಿ ತೊಟವನ್ನು ಎಷ್ಟು ಎಕರೆ ಹೊಂದಿದ್ದಾರೆ

| ಕ್ರ. ಸಂ | ವಿವರಣೆ (ಎಕರೆಯಲ್ಲಿ) | ಆವೃತಿ | ಶೇಕಡವಾರು |
|---|---|---|---|
| ೦೧ | ೧೦–೨೫ | ೦೮ | ೨೪ |
| ೦೨ | ೨೬–೫೦ | ೧೩ | ೩೯ |
| ೦೩ | ೫೧–೭೫ | ೦೨ | ೦೬ |
| ೦೪ | ೭೬–೧೦೦ | ೦೭ | ೨೧ |
| ೦೫ | ೧೦೧+ | ೦೩ | ೦೯ |
| | ಒಟ್ಟು | ೫೦ | ೧೦೦ |

ಸಂದರ್ಶನ ಮಾಡುವಾಗ ೧೦–೨೫ ಎಕರೆ ಹೊಂದಿರುವ ೮ (೨೪%) ಜನರು, ೨೬–೫೦ ಎಕರೆ ಹೊಂದಿರುವ ೧೩(೩೯%) ಜನರು, ೫೧–೭೫ ಎಕರೆ ಹೊಂದಿರುವ ೨ (೬%) ಜನರು, ೭೬–೧೦೦ ಎಕರೆ ಹೊಂದಿರುವ ೭ (೨೧%) ಜನರು, ೧೦೧ ಎಕರೆಗೂ ಹೆಚ್ಚಿರುವ ೩(೯%) ಜನರನ್ನು ಸಂರ್ದನ ಮಾಡಿದಾಗ ೨೬–೫೦ ಎಕರೆ ಹೊಂದಿರುವವರು ಹೆಚ್ಚಿರುವುದು ಕಂಡುಬರುತ್ತದೆ.

ಕಾರ್ಮಿಕರು ಮತ್ತು ಮಾಲಿಕರ ಸಂಬಂದ

| ಕ್ರ. ಸಂ | ವಿವರಣೆ | ಆವೃತಿ | ಶೇಕಡವಾರು |
|---|---|---|---|
| ೦೧ | ಉತ್ತಮ | ೧೨ | ೨೪ |
| ೦೨ | ಸಾಮಾನ್ಯ | ೨೫ | ೫೦ |
| ೦೩ | ಕೆಳಮಟ್ಟ | ೧೩ | ೨೬ |
| | ಒಟ್ಟು | ೫೦ | ೧೦೦ |

ಕಾಫಿ ತೋಟದಲ್ಲಿ ಕಾರ್ಮಿಕರು ಮತ್ತು ಮಾಲಿಕರ ಸದಂಬಂದ ಹೇಗಿದೆ ಎಂದು ೫೦ ಜನ ಕಾರ್ಮಿಕರು ಮತ್ತು ಮಾಲಿಕರನ್ನು ಕೇಳಿದಾಗ ಅವರಲ್ಲಿ ೨೪% ಜನರು ಉತ್ತಮ ಎಂದು, ೫೦% ಜನರು ಸಾಮಾನ್ಯ ಎಂದು, ೨೬% ಜನರು ಕೆಳಮಟ್ಟದ ಸಂಬಂದ ಹೊಂದಿದ್ದಾರೆ ಎಂದು ತಿಳಿದು ಬಂದಿದೆ. ಇದರಿಂದ ನಮಗೆ ತಿಳಿಯುವುದೆನೆಂದರೆ ಕಾರ್ಮಿಕರು ಮತ್ತು ಮಾಲಿಕರ ಸಂಬಂದ ಉತ್ತಮವಾಗಿಲ್ಲ ಎಂದು ಹೇಳಬಹುದು.

ಕಾಫಿ ತೋಟದಲ್ಲಿ ಕೆಲಸಮಾಡುವ ಕಾರ್ಮಿಕರು

| ಕ್ರ. ಸಂ | ವಿವರಣೆ | ಆವೃತಿ | ಶೇಕಡವಾರು |
|---|---|---|---|
| ೦೧ | ಸ್ಥಳಿಯರು | ೪೪ | ೮೮ |
| ೦೨ | ವಲಸಿಗರು | ೦೬ | ೧೨ |
| | ಒಟ್ಟು | ೫೦ | ೧೦೦ |

ಕಾಫಿ ತೋಟದಲ್ಲಿ ಕೆಲಸ ಮಾಡುವರು ಹೆಚ್ಚಾಗಿ ಸ್ಥಳೀಯ ಕಾರ್ಮಿಕರು ಎಂದು ಅಧ್ಯಯನದಿಂದ ತಿಳಿದು ಬಂದಿದೆ.

ಕಾರ್ಮಿಕರು ದಿನಗೂಲಿ ಇದ್ದರೆ

| ಕ್ರ. ಸಂ | ವಿವರಣೆ | ಆವೃತಿ | ಶೇಕಡವಾರು |
|---|---|---|---|
| ೦೧ | ಲಾಭ | ೩೧ | ೬೨ |
| ೦೨ | ನಷ್ಠ | ೧೯ | ೩೮ |
| | ಒಟ್ಟು | ೫೦ | ೧೦೦ |

ಕಾಫಿ ತೋಟದಲ್ಲಿ ದಿನಗೂಲಿ ಕಾರ್ಮಿಕರಿದ್ದರೆ ಲಾಭ ಅಥವ ನಷ್ಟನ ಎಂದು ೫೦ ಜನರನ್ನು ಕೇಳಿದಾಗ ೬೨% ಜನರು ಲಾಭ ಎಂದು ಹೇಳಿದ್ದಾರೆ. ಇದರಿಂದ ತಿಳಿವುದೆನೆಂದರೆ ದಿನಗೂಲಿ ಕಾರ್ಮಿಕರು ಕಾಫಿ ತೋಟದಲ್ಲಿ ಕೆಲಸ ಮಾಡುವುದು ಮಾಲಿಕರಿಗೆ ಹೆಚ್ಚು ಲಾಭ ಎಂದು ಅಧ್ಯಯನದಿಂದ ತಿಳಿದುಬಂದಿದೆ.

ಕಾಫಿ ತೋಟಕ್ಕೆ ಉಳುವವನೆ ಭೂಮಿ ಒಡಯ ಪದ್ದತಿ ಅನ್ವಯವಾಗಬಹುದ

| ಕ್ರ. ಸಂ | ವಿವರಣೆ | ಆವೃತಿ | ಶೇಕಡವಾರು |
|---|---|---|---|
| ೦೧ | ಹೌದು | ೧೬ | ೬೪ |
| ೦೨ | ಇಲ್ಲ | ೦೯ | ೩೬ |
| | ಒಟ್ಟು | ೨೫ | ೧೦೦ |

ಕಾಫಿ ತೋಟಕ್ಕೆ ಉಳುವವನೆ ಭೂಮಿ ಒಡಯ ಪದ್ದತಿ ಅನ್ವಯವಾಗುತ್ತದೆಯೇ ಎಂದು ಕೇಳಿದಾಗ ೬೪%ಜನರು ಅನ್ವಯವಾಗುತ್ತದೆ ತಿಳಿಸಿದ್ದಾರೆ.

ಕಾಫಿ ತೋಟದಲ್ಲಿ ಬಾಲ ಕಾರ್ಮಿಕ ಇದ್ದಾರೆ

| ಕ್ರ. ಸಂ | ವಿವರಣೆ | ಆವೃತಿ | ಶೇಕಡವಾರು |
|---|---|---|---|
| ೦೧ | ಹೌದು | ೩೧ | ೬೨ |
| ೦೨ | ಇಲ್ಲ | ೧೯ | ೩೮ |
| | ಒಟ್ಟು | ೫೦ | ೧೦೦ |

೭ ಕಾಫಿ ತೋಟದಲ್ಲಿ ಬಾಲ ಕಾರ್ಮಿಕರು ಇದ್ದಾರೆಯೇ ಎಂದು ಸಂದರ್ಶನ ಮಾಡಿದಾಗ ೬೨% ಹೌದು ಎಂದು ಹೇಳುವ ಮೂಲಕ ಬಾಲ ಕಾರ್ಮಿಕರಿದ್ದಾರೆ ಎಂಬುದು ಗೊತ್ತಾಗಿದೆ.

ಕಾಫಿ ತೋಟದಲಲ್ಲಿ ಬೆಳೆಯುವ ಇತರೆ ಬೆಳೆಗಳು

| ಕ್ರ. ಸಂ | ವಿವರಣೆ | ಆವೃತಿ | ಶೇಕಡವಾರು |
|---|---|---|---|
| ೦೧ | ಏಲಕ್ಕಿ | ೦೬ | ೧೨ |
| ೦೨ | ಮೆಣಸು | ೨೪ | ೪೮ |
| ೦೩ | ಕಿತ್ತಾಳೆ | ೦೮ | ೧೬ |
| ೦೪ | ಬಾಳೆ | ೧೨ | ೨೪ |
| | ಒಟ್ಟು | ೫೦ | ೧೦೦ |

ಕಾಫಿ ತೋಟದಲ್ಲಿ ಬೆಳೆಯುವ ಇತರೆ ಬೆಳೆಗಳು ಏಲಕ್ಕಿ ೧೨%, ಮೆಣಸು ೪೮%, ಕಿತ್ತಾಳೆ ೧೬% ಹಾಗೂ ಬಾಳೆ ೨೪% ಬೆಳೆಯುತ್ತಿದ್ದು ಮೆಣಸನ್ನು ಹೆಚ್ಚಾಗಿ ಬೆಳೆಯುತ್ತಾರೆ.

ಕೆಲಸದ ಅವದಿಯಲ್ಲಿ ಗಾಯ / ಮರಣ ಹೊಂದಿದರೆ ಪರಿಹಾರ ನೀಡುವರು

| ಕ್ರ. ಸಂ | ವಿವರಣೆ | ಆವೃತಿ | ಶೇಕಡವಾರು |
|---|---|---|---|
| ೦೧ | ಹೌದು | ೦೮ | ೧೬ |
| ೦೨ | ಇಲ್ಲ | ೪೨ | ೮೪ |
| | ಒಟ್ಟು | ೫೦ | ೧೦೦ |

ಕಾಫಿ ತೋಟದಲ್ಲಿ ಕೆಲಸ ಮಾಡುವಾಗ ಕಾರ್ಮಿಕರಿಗೆ ಗಾಯಗಳಾದರೆ ಅಥವ ಮರಣ ಹೊಂದಿದರೆ ಪರಿಹಾರ ನೀಡುವರೆ ಎಂದು ಕೇಳಿದಾಗ ೧೬% ಜನರು ನೀಡುತ್ತಾರೆ ಎಂದು ೮೪% ಜನರು ಪರಿಹಾರ ನೀಡುವುದಿಲ್ಲ ಎಂದರು. ಇದರಿಂದ ನಮಗೆ ತಿಳಿವುದೆನೆಂದರೆ ಹೆಚ್ಚಿನ ಕಾರ್ಮಿಕರಿಗೆ ಗಾಯಗಳಾದರೆ ಅಥವ ಮರಣ ಹೊಂದಿದರೆ ಪರಿಹಾರ ದೊರೆಯುದಿಲ್ಲ ಎಂದು ಹೇಳಬವುದು.

ಕಾರ್ಮಿಕರ ಸಾಕ್ಷರತೆ

| ಕ್ರ. ಸಂ | ವಿವರಣೆ | ಆವೃತಿ | ಶೇಕಡವಾರು |
|---|---|---|---|
| ೦೧ | ಅಕ್ಷರಸ್ತರು | ೦೯ | ೧೮ |
| ೦೨ | ಅನಕ್ಷರಸ್ತರು | ೪೧ | ೮೨ |
| | ಒಟ್ಟು | ೫೦ | ೧೦೦ |

ಈ ಮೇಲಿನ ಕೋಷ್ಟಕ ಗಮನಿಸಿದಾಗ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಲ್ಲಿ ಅಕ್ಷರಸ್ತರು ೧೮% ಅನಕ್ಷರಸ್ತರು ೮೨% ಇದ್ದು, ಇಂದಿಗೂ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಲ್ಲಿ ಅನಕ್ಷರಸ್ತರು ಹೆಚ್ಚಿದ್ದಾರೆ ಎಂದು ಗೊತ್ತಾಗುತ್ತಿದೆ.

**ಅಧ್ಯಯನದಿಂದ ಕಂಡುಕೊಂಡ ಅಂಶಗಳು**

ಕಾರ್ಮಿಕರು ಮತ್ತು ಮಾಲಿಕರ ಅಭಿವೃದ್ಧಿಯಲ್ಲಿ ಕಾಫಿ ತೋತದ ಪಾತ್ರ ಈ ಕುರಿತು ಚಿಕ್ಕಮಗಳೂರು ತಾಲ್ಲೂಕಿನ ಒಂದು ಅಧ್ಯಯನ ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನ ಕೈಗೊಂಡು ಮಾಹಿತಿಯನ್ನು ಕಲೆಹಾಕಲಾಗಿದೆ. ಕಾಫಿಯ ನೆಲೆಬೀಡು ನದಿಗಳ ಉಗಮ ಸ್ಥಾನ ಅನೇಕ ಪ್ರಕ್ಷಣೀಯ ಭಾವೈಕ್ಯತ ಸ್ಥಳಗಳನ್ನು ಬೆಟ್ಟ ಗುಡ್ಡ ಅರಣ್ಯಗಳಿಂದ ಅವೃತವಾಗಿರುವ ಜಿಲ್ಲೆಯು ಸಾಂಸ್ಕೃತಿಕ ರಂಗದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ, ಕ್ರೀಡಾಕ್ಷೇತ್ರದಲ್ಲಿ ರಮಣೀಯ ಸಾಧನೆಯನ್ನು ಎಂಬುವುದು ಅಧ್ಯಯನದಿಂದಲು ಸಾಬೀತಾಗಿದೆ.

ಚಿಕ್ಕಮಗಳೂರು ತಾಲ್ಲೂಕಿನ ಕಾಫಿತೋಟದ ಕುರಿತು ನೇರ ಸಂದರ್ಶನದ ಮೂಲಕ ಅಧ್ಯಯನ ಮಾಡಿದ್ದರ ಭಾಗವಾಗಿ ಬಂದಂತಹ ಫಲಿತಾಂಶವನ್ನು ಅವಲೋಕಿಸೋಣ. ಇಲ್ಲಿನ ಕುಟುಂಬಗಳು ಕೆಲವು ಮಾಲಿಕರ ಸ್ಥಾನದಲ್ಲಿ ಕಂಡು ಬಂದರೆ. ಉಳಿದಂತವುಗಳು ಕಾರ್ಮಿಕರ ಸ್ಥಾನದಲ್ಲಿ ಕಂಡುಬಂದಿವೆ.

ಕಾಫಿ ತೋಟ ಎಷ್ಟು ಎಕರೆಯನ್ನು ಹೊಂದಿದ್ದಾರೆ ಎಂಬ ಪ್ರಶ್ನೆಗೆ ಹೆಚ್ಚಾಗಿ ೨೫–೫೦ ಎಕರೆ ಹೊಂದಿರುವವರು ಕಂಡು ಬಂದಿದ್ದು ೨೫ ರಿಂದ ೨೫೦ಎಕರೆಗೂ ಹೆಚ್ಚು ಹೊಂದಿರುವ ಬೆಳೆಗಾರರು ಕಂಡುಬರುತ್ತಾರೆ. ೯೮% ರಷ್ಟು ಆಸ್ತಿಯು ಪಿತ್ರಾರ್ಜತವಾಗಿ ತಲತಲಾಂತರವಾಗಿ ವರ್ಗಾವಣೆಗೊಂಡಂತಹ ಆಸ್ತಿಯಾಗಿದೆ.

ಕಾರ್ಮಿಕರು ಮತ್ತು ಮಾಲಿಕರ ನಡುವಿನ ಸಂಬಂದ ಸಾಮಾನ್ಯವಾಗಿದೆ ಎಂದು ಕಂಡುಬಂದಿದೆ. ಕಾಫಿತೋಟದಲ್ಲಿ ಕೆಲಸ ಮಾಡುವ ಕಾರ್ಮಿಕರು ಹೆಚ್ಚಾಗಿ ಸ್ಥಳಿಯರಾಗಿದ್ದಾರೆ. ಇಂದು ವಲಸಿಗರ ಪ್ರಮಾಣ ಗಣನೀಯವಾಗಿ ಕಡಿಮೆಯಾಗುತ್ತಿದ್ದು ಬೆಳೆಗಾರರು ಇಂದು ಕಾರ್ಮಿಕರಿಗಾಗಿ ಸ್ಥಳೀಯ ಪಟ್ಟಣ ಪ್ರದೇಶಗಳ ಕಡೆ ಮುಖಮಾಡಿದ್ದು ಅವರಿಗೆ ಕೂಲಿಯ ಜೊತೆ ಸಾರಿಗೆ ವೆಚ್ಚವನ್ನು ಭರಿಸಬೇಕಾದ್ದರಿಂದ ಒಟ್ಟು ವೆಚ್ಚ ಹೆಚ್ಚಾಗುತ್ತಿದೆ. ಕಾರ್ಮಿಕರು ದಿನಗೂಲಿ ಇದ್ದರೆ ಹೆಚ್ಚು ಲಾಭ ಎನ್ನುತ್ತಾರೆ. ಆದರೆ, ಮಾಲಿಕರು ಇದಕ್ಕೆ ವಿರುದ್ದವಾದ ಹೇಳಿಕೆಯನ್ನು ನೀಡುತ್ತಾರೆ. ಕಾರ್ಮಿಕರು ಕೂಲಿಗೆ ತಕ್ಕ ಕೆಲಸ ಮಾಡುತ್ತೇವೆ ಎಂದರೆ ಮಾಲಿಕರು ಇಂದು ಕಾರ್ಮಿಕರು ಕೆಲಸಮಾಡುವ ಅವಧಿ ಕಡಿಮೆಯಾಗುತ್ತಿದೆ, ಹಾಗೂ ಅವರಿಗೆ ಶ್ರಮಕ್ಕಿಂತ ಕೂಲಿಯ ಪ್ರಮಾಣ ಹೆಚ್ಚಾಗಿದೆ ಎನ್ನುತ್ತಾರೆ. ಆದರೆ ಬಹುತೇಕ ಕಾರ್ಮಿಕರು ನಮಗೆ ನೀಡುತ್ತಿರುವ ಕೂಲಿ ಕಡಿಮೆಯಾಗಿದ್ದು ನಮ್ಮನ್ನು ದೈಹಿಕವಾಗಿ ಹೆಚ್ಚು ದುಡಿಸಿಕೊಳ್ಳುವ ಮೂಲಕ ಮಾಲಿಕರು ಹೆಚ್ಚು ಆದಾಯವನ್ನು ಸಂಪಾದಿಸುತ್ತಿದ್ದಾರೆ ಎನ್ನುತ್ತಾರೆ.

ತಾಲ್ಲೂಕಿನಲ್ಲಿ ಬಹುತೇಕರು ಹೆಚ್ಚಾಗಿ ಅರೇಬಿಕಾವನ್ನು ಬೆಳೆಯುತ್ತಿದ್ದು ಈ ಬೆಳೆಗೆ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಾಗಿದ್ದು ಹೆಚ್ಚಿನ ಆದಾಯ ತಂದುಕೊಡುವ, ಪರಿಸರಕ್ಕೆ ಹೊಂದಾಣಿಕೆಯಾಗುವ ಬೆಳೆಯಾಗೆದೆ. ವಾರ್ಷಿಕವಾಗಿ ಒಂದು ಎಕರೆ ಪ್ರದೇಶದಲ್ಲಿ ಬೆಳೆ ಬೆಳೆಯಲು ತಗುಲುವ ವೆಚ್ಚ ೩೫,೦೦೦ – ೪೫,೦೦೦ ರೂಗಳಾಗಿವೆ.

ಕಾಫಿಯ ಜೊತೆಯಲ್ಲಿ ಏಲಕ್ಕಿ, ಕಿತ್ತಲೆ, ಬಾಳೆ, ಮೆಣಸನ್ನು ಬೆಳೆಯುತ್ತಾರೆ. ಮೆಣಸು ಕಡಿಮೆ ವೆಚ್ಚದಲ್ಲಿ ಹೆಚ್ಚು ಆದಾಯ ತಂದುಕೊಡುವ ಬೆಳೆಯಾಗಿದೆ. ಆದರೆ ತಾಲ್ಲೂಕಿನಲ್ಲಿ ಕಾಫಿ ಅಥವಾ ಇತರೆ ಯಾವುದೆ ಬೆಳೆಯನ್ನು ಶೇಕರಣೆ ಮಾಡಲು ಉಗ್ರಾಣ ವ್ಯವಸ್ಥೆ ಇಲ್ಲ.

ಕಾಫಿ ತೋಟದಲ್ಲಿ ಹೆಚ್ಚಾಗೆ ಮಹಿಳೆಯರು ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಬಾಲ ಕಾರ್ಮಿಕರು ಇದ್ದು ವಿದ್ಯಾವಂತ ಕಾರ್ಮಿಕರು ಸಹ ಇದ್ದಾರೆ. ಕಾಫಿ ತೋಟದಲ್ಲಿ ದುಡಿಯುವ ಕಾರ್ಮಿಕರಿಗೆ ಔಷದಿ ಸಿಂಪಡಿಸಲು ಮುಂಜಾಗೃತ ಸಾಮಗ್ರಿಗಳಿಲ್ಲ ಹಾಗೂ ಯಂತ್ರಗಳ ಬಳಕೆ ಕಡಿಮೆ ಇದೆ. ಕೆಲಸದ ಅವಧಿಯಲ್ಲಿ ಗಾಯಗಳಾದರೆ ಅಥವ ಮರಣಹೊಂದಿದರೆ ಕಾರ್ಮಿಕರಿಗೆ ಪರಿಹಾರ ನೀಡುವುದು ಬೆರಳೆಣಿಕೆಯಷ್ಟು. ಇಂತಹ ಸಂದರ್ಭಗಳು ಎದುರಾಗಬಹುದು ಎಂಬ ಉದ್ದೇಶದಿಂದ ಸರ್ಕಾರ ಕಾರ್ಮಿಕರಿಗೆ ಜೀವ ವಿಮೆ ಮಾಡಿಸಬೇಕು ಎನ್ನುವ ಆದೇಶ ನೀಡಿದ್ದರೂ ಮಾಲಿಕರು ಕೆಲವು ಸಿಮಿತ ವ್ಯಕ್ತಗಳಿಗೆ ಅಂದರೆ ೩ ಅಥವ ೪ ವ್ಯಕ್ತಿಗೆ ವಿಮೆ ಮಾಡಿಸಿ ಯಾವುದೇ ವ್ಯಕ್ತಿಗೆ ಗಂಭೀರ ಅಘಾತಗಳುಂಟಾದಲ್ಲಿ ಅಘಾತಕ್ಕೆ ಒಳಗಾದ ವ್ಯಕ್ತಿಯ ಹೆಸರಿಗೆ ವಿಮೆ ಪಡೆದುಕೊಳ್ಳುತ್ತಾರೆ. ಈ ರೀತಿ ವಿಮೆ ಮಾಡಿಸುವ ಮಾಲಿಕರ ಸಂಖ್ಯೆಯೂ ಕಡಿಮೆ ಇದೆ.

ಕಾರ್ಮಿಕರಿಗೆ ಕಾಫಿ ತೋಟದಲ್ಲಿ ಹೆಚ್ಚಿನ ಪ್ರಾಮಾಣದ ತೋಟದಲ್ಲಿ ವಸತಿ ಸೌಲಭ್ಯ ಇರುವುದಿಲ್ಲ. ಇದ್ದಂತಹ ವಸತಿಗಳು(ಲೈನ್‌ಮನೆ) ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದು. ಸ್ವಚ್ಚತೆ ಎಂಬುವುದು ಮರೀಚಿಕೆಯಾಗಿದೆ. ವಸತಿ ಸೌಲಭ್ಯ ಇರುವ ತೋಟದಲ್ಲಿ ಕಾರ್ಮಿಕಕರ ದೈಹಿಕ ಮಾನಸಿಕ ಹಾಗೂ ಲೈಂಗಿಕ ಶೋಷಣೆಗಳು ಹೆಚ್ಚಾಗಿ ಕಂಡುಬರುತ್ತದೆ. ಲೈಂಗಿಕ ಶೋಷಣಯನ್ನು ಸಾಮಾನ್ಯವಾಗಿ ಮಾಲಿಕರಂದಾಗುವುದು ಕಡಿಮೆ ಆದರೆ ತೋಟದ ಮ್ಯಾನೇಜರ್ ಮತ್ತು ರೈಟರ್‌ಗಳಿಮದ ೨೦ – ೫೦ ಎಕರೆ ಹೊಂದಿರುವ ಮಾಲಿಕರು ಹೆಚ್ಚಾಗಿ ಈ ಕೃತ್ಯಗಳನ್ನು ನಡೆಸುತ್ತಾರೆ. ಈ ಶೋಷಣೆಯ ವಿರುದ್ದ ಧ್ವನಿ ಎತ್ತುವ, ಕಾರ್ಮಿಕರಿಗೆ ಸ್ಪಂದಿಸುವ, ಅವರ ಹಕ್ಕುಗಳ ಬಗ್ಗೆ ಮಾತನಾಡುವ, ಸಮಸ್ಯಗಳನ್ನು ಆಲಿಸುವ, ನ್ಯಾಯವನ್ನೊದಗಿಸಲು ಯಾವುದೇ ಕಾರ್ಮಿಕ ಸಂಘಟನೆಗಳು ಕಂಡುಬರುವುದಿಲ್ಲ. ಕಾರ್ಮಿಕರಲ್ಲಿ ಹೆಚ್ಚನ ಪ್ರಾಮಾಣದವರು ಅನಕ್ಷರಸ್ತರಾಗಿದ್ದು ಲೌಕಿಕ ಪ್ರಪಂಚದ ಜ್ಞಾನವಿಲ್ಲದವರಾಗಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದರೂ ಆವರ ರಾಜಕೀಯ ಜ್ಞಾನ ತೀರ ಕೆಳಮಟ್ಟದ್ದಾಗಿದೆ, ಲೋಕಸಭಾ ರಾಜ್ಯಸಭಾ, ವಿಧಾನ ಪರಿಷತ್, ವಿಧಾನ ಸಭಾ ಚುನಾವಣೆಗಳ ಬಗ್ಗ ಜ್ಞಾನ ಕಡಿಮೆ ಇದೆ.

ಮಾಲಿಕರು ಇಂದು ಕಾರ್ಮಿಕರ ಸಮಸ್ಯೆಯನ್ನು ಅನುಭವಿಸುವುದರ ಜೊತೆಯಲ್ಲಿ, ಕಾಫಿ ಬೆಲೆಯು ಇಂದಿನ ಸಲಕರಣೆಗಳು ಸಾಮಗ್ರಿಗಳ ಬೆಲೆ ಏರಿಕೆಗೆ ಅನುಗುಣವಾಗಿ ದೊರೆಯುತಿಲ್ಲ ಎಂಬುದು ಮಾಲಿಕರ ಸಮಸ್ಯೆಯಾಗಿದೆ. ಇನ್ನು ಮಾಲಿಕರು ರಾಜಕೀಯವಾಗಿ ಉತ್ತುಂಗ ಸ್ಥಾನದಲ್ಲಿದ್ದು ಜಿಲ್ಲೆಯ ಎಲ್ಲಾ ಮುಂಚೂಣಿನಾಯಕರು ಅಥವ ರಾಜಕೀಯ ವ್ಯಕ್ತಿಗಳು ಭೂಮಾಲಿಕರೆ ಆಗಿದ್ದಾರೆ.

**ಮಾಲಿಕರ ಬೇಡಿಕೆಗಳು**

೧. ಕಾಫಿ ಸಾಲಮನ್ನ ಮಾಡಬೇಕು.
೨. ರೋಗಗಳನ್ನು ನಿಯಂತ್ರಿಸಲು ಕ್ರಿಮಿನಾಶಕಗಳ ಕೊರತೆ.
೩. ಕಾಫಿ ಬೆಳೆಗೆ ಬೆಲೆ ಹೆಚ್ಚುಮಾಡಬೇಕು.
೪. ಕಾಫಿಯನ್ನು ಶೇಕರಣೆ ಮಾಡಲು ಸಮರ್ಪಕ ಉಗ್ರಾಣ ವ್ಯವಸ್ಥೆ ನಿರ್ಮಿಸಬೇಕು.

**ಕಾರ್ಮಿಕರ ಬೇಡಿಕೆಗಳು**

೧. ಕಾರ್ಮಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು.
೨. ಸರ್ಕಾರದಿಂದ ಸಿಗುವ ಸೌಲಭ್ಯಗಳು ಪ್ರಮಾಣಿಕವಾಗಿ ಮತ್ತು ಸಮರ್ಪಕವಾಗಿ ಕಾರ್ಮಿಕರಿಗೆ ಸಿಗಬೇಕು.
೩. ಕಾರ್ಮಿಕರ ಶೋಷಣೆಯನ್ನು ಪಡೆಯುವುದರ ಜೊತೆಗೆ ಸಮಸ್ಯೆಗೆ ಸ್ಪಂದಿಸುವ ಕಾರ್ಮಿಕ ಸಂಘಟನೆ ಇರಬೇಕು.
೪. ಉತ್ತಮ ಸಂಬಳ, ಆರೋಗ್ಯ, ವಿಮೆ ಮತ್ತು ಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಕಲ್ಪಿಸುವುದು.
೫. ಸರ್ಕಾರ ಕಾರ್ಮಿಕರಿಗೆ ಸ್ವಂತ ಜಮಿನನ್ನು ನೀಡಬೇಕು.

**ಸಲಹೆಗಳು**

- ಸರ್ಕಾರ ಭೂಮಿತಿ ಕಾಯ್ದೆಯನ್ನು ಜಾರಿಮಾಡುವುದು ಮತ್ತು ಭೂರಹಿತ ಬಡವರಿಗೆ ಭೂಮಿ ಹಂಚುವುದು ಹಾಗೂ ೫ ಎಕರೆಗೂ ಹೆಚ್ಚು ಒತ್ತುವರಿ ಮಾಡಿರುವ ಭೂಮಿ ಬಿಡಿಸಿ ವಸತಿ ಮತ್ತು ಭೂ ರಹಿತರಿಗೆ ನೀಡುವುದು ಅಥವ ಭೂಮಿ ರಾಷ್ಟ್ರೀಕರಣ ಮಾಡುವುದು,
- ಕಾಫಿ ಬೆಳೆಯುವುದರ ಜೊತೆಯಲ್ಲಿ ಆಹಾರದ ಬೆಳೆಗಳು ಬೆಳೆಯಲು ಆದ್ಯತೆ ನೀಡುವುದು.
- ಸರ್ಕಾರ ಮಾಲಿಕರಿಗೆ ಕಾಫಿ ಬೆಳೆಯಲು ಉತ್ತಮ ರಸಾಯನಿಕಗಳನ್ನ ಒದಗಿಸುವುದು ಮತ್ತು ಉಗ್ರಾಣ ಸೌಲಭ್ಯವನ್ನು ಒದಗಿಸಬೇಕು.
- ಕಾರ್ಮಿಕರ ಆರ್ಥಿಕ, ರಾಜಕೀಯ ಸಾಮಾಜಿಕ ಅಭಿವೃದ್ಧಿಯ ಜೊತೆಗೆ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ಟೆಂಟ್ ಶಾಲೆಗಳನ್ನು ತೆರೆಯುವುದು.
- ಬಹುರಾಷ್ಟ್ರಿಯ ಕಂಪನಿಗಳ ಹಿತಾಶಕ್ತಿಕಾಪಾಡಲು ಮತ್ತು ಅಭಿವೃದ್ಧಿ ಹೆಸರಿನಲ್ಲಿ ನಡೆಯುತ್ತಿರುವ ಪರಿಸರ ನಾಶ ತಡೆಯುವುದು. ಹಾಗೂ ಎಲ್ಲಾ ಮಾನವರಿಗೆ ಕಾಯಕದಿಂದ ಕೈಲಾಸ ಕಾಣಲು ಅವಕಾಶಮಾಡಿಕೊಡುವುದು. ಆ ಮೂಲಕ ಖಾಸಗೀಕರಣವನ್ನು ವಿರೋದಿಸುವುದು.
- ಮಾಲಿಕರಿಂದ ಕಾರ್ಮಿಕರ ಮೇಲಾಗುವ ಶೋಷಣೆಯನ್ನು ತಡೆಯುವ ಮೂಲಕ ಉತ್ತಮ ಸಂಬಂದವನ್ನು ಏರ್ಪಡಿಸುವುದು.
- ಕಾರ್ಮಿಕ ಕಾನೂನುಗಳ ಬಗ್ಗೆ ಕಾರ್ಮಿಕರಿಗೆ ಅರಿವು ಮೂಡಿಸುವುದು ಮತ್ತು ಕಾರ್ಮಿಕರಿಗೆ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಕಾಗುವಷ್ಟು ವೇತನ ನೀಡುವುದು.

**ಉಪಸಂಹಾರ**

ಕಾರ್ಮಿಕರು ಮತ್ತು ಮಾಲಿಕರ ಅಭಿವೃದ್ಧಿಯಲ್ಲಿ ಕಾಫಿತೋಟದ ಪಾತ್ರ ಏನು ಎಂಬುದನ್ನು ನಾವು ಈ ಹಿಂದೆ ನೋಡಿದೆವು ಕಾಫಿ ತೋಟದಿಂದ ಮಾಲಿಕರ ಅಭಿವೃದ್ಧಿ ಸಾದ್ಯಾವಾಗಿದಿಯೇ ಹೊರತು ಕಾರ್ಮಿಕರ ಅಭಿವೃದ್ಧಿ ಸಾದ್ಯವಾಗಿಲ್ಲ ಎಂಬುದನ್ನು ತಿಳಿದುಕೊಂಡಿದ್ದೆವೆ. ಇಂದು ಕಾರ್ಮಿಕರ ಮಕ್ಕಳು ಶಿಕ್ಷಣ ಪಡೆದು ನಗರದತ್ತ ಸಾಗುತ್ತಿರುವುದು, ಸ್ವಾಭಿಮಾನಿಗಳಾಗಿ ಬದಕಲು ಹೊರಟಿರುವುದು ಇಂದು ಕಾಫಿತೋಟದಲ್ಲಿ ಕಾರ್ಮಿಕರ ಸಮಸ್ಯೆ ಉಂಟಾಗಲು ಕಾರಣವಾಗಿದೆ ಎಂದು ಹೇಳಬಹುದು. ಇದು ಸಣ್ಣ ಬೆಳೆಗಾರರಿಗೆ ಅತಿಹೆಚ್ಚಿನ ಪರಿಣಾಮಬೀರುತ್ತಿದೆ ಕಾರಣ ಸ್ಥಳೀಯವಾಗಿ ಕಾರ್ಮಿಕರು ಸಿಗುತ್ತಿಲ್ಲ, ಬೇರೆಕಡೆಯಿಂದ ಜನ ತರುವುದು ದುಬಾರಿಯಾಗಿದೆ. ಈ ಒಂದು ಸಮಸ್ಯೆಯನ್ನು ನಿವಾರಿಸಲು, ಕಾರ್ಮಿಕರಿಗೆ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದು ಜೊತೆಯಲ್ಲಿ ಅವರ ಸಾಮಾಜಿಕ ಸ್ಥಾನಮಾನಗಳಿಗೆ ಗೌರವ ದೊರಕಬೇಕು. ಆ ಮೂಲಕ ಮಾಲಿಕರು ಮತ್ತು ಕಾರ್ಮಿಕರ ಸಂಬಂದವನ್ನು ವೃದ್ಧಿಪಡಿಸಬೇಕಾಗಿದೆ. ಮಾಲಿಕರು ಗುಣಮಟ್ಟದ ಕಾಫಿಯನ್ನು ಬೆಳೆಯುವ ಮೂಲಕ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಕಾಫಿಗೆ ಮಾನ್ಯತೆ ದೊರಯುವಂತಾಗಬೇಕು. ಭೂಮಾಲಿಕರು ತಮ್ಮ ಊಳಿಗಮಾನ್ಯ ಷಾಹಿ ವ್ಯವಸ್ಥೆಯನ್ನು ಕೈಬಿಟ್ಟು ಪ್ರಜಾಪ್ರಭುತ್ವ ವ್ಯವಸ್ಥೆಯ ಸ್ವಾತಂತ್ರ್ಯ ಸಮಾನತೆಗನುಗುಣವಾಗಿ ನಡೆದುಕೊಳ್ಳವುದರ ಮೂಲಕ ಚಿಕ್ಕಮಗಳೂರು ಜಿಲ್ಲೆಯನ್ನ ಒಂದು ಮಾದರಿ ಜಿಲ್ಲೆ ಎನಿಸುವ ಮೂಲಕ ವಿಶ್ವದ ಗಮನ ಸೆಳೆಯಬೇಕಿದೆ.

**ಅಧಾರ ಗ್ರಂಥ**


೧. ಕಾಫಿ ತೋಟದ ಕೈಪಿಡಿ, ಕೇಂದ್ರೀಯ ನಿರ್ದೇಶನಾಲಯ ಘಟಕ ಚಿಕ್ಕಮಗಳೂರು.
೨. ಚಿಕ್ಕಮಗಳೂರು ಜಿಲ್ಲಾದರ್ಶನ ಪಾರ್ಥಸಾರಥಿ ಮತ್ತು ರಾಮನಾಯಕ್
೩. ಸುಧಾ ಮಾಸ ಪತ್ರಿಕೆಯ ಸಂಕಲನ (೨೦೧೧)
4. Coffee trails Indian coffee voll -4 (2004) Apparna data.
5. Profile of Hassan dirstrict Indian coffee(2003) Balakrishna